ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ರುಸ್ತುಂಪುರ ಏತ ನೀರಾವರಿ ಯೋಜನೆಯನ್ನು ಘಟಪ್ರಭಾ ಯೋಜನೆಯ 3ನೇ ಘಟ್ಟದ ಪರಿಷ್ಕೃತ ಅಂದಾಜಿನಲ್ಲಿ ಅಳವಡಿಸಿ ಕೆಲ ನಿಬಂದನೆಗಳೊಡನೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸರ್ಕಾರವು ಜೂನ್ 1992ರಲ್ಲಿ ಅನುಮತಿ ನೀಡಿದೆ.

ಆ) ಈ ಕೆಲಸವನ್ನು 1992-93ನೇ ಸಾಲಿನಲ್ಲಿ ಪ್ರಾರಂಭಿಸಲು ಯೋಜಿಸಲಾಗಿದೆ.

ಇ) 6800 ಎಕರೆಗಳು.

ಈ) 1992-93ನೇ ಸಾಲಿನಲ್ಲಿ ಈ ಯೋಜನೆಗಾಗಿ 10 ಲಕ್ಷ ರೂ.ಗಳ ಕಾರ್ಯಕ್ರಮವನ್ನು ಮುಖ್ಯ ಇಂಜಿನಿಯರ್‌ರವರು ಹಮ್ಮಿಕೊಂಡಿರುತ್ತಾರೆ. ಕಾಮಗಾರಿಯು ಪ್ರಾರಂಭವಾದ ನಂತರ ಬೇಕಾದ ಹಣವನ್ನು ಬಿಡುಗಡೆ ಮಾಡಲಾಗುವುದು.

ಹುಕ್ಕೇರಿ ಕ್ಷೇತ್ರದಲ್ಲಿ ಮಂಜೂರಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳು.

965 - ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಕ್ಕೇರಿ ಕ್ಷೇತ್ರದಲ್ಲಿ ಮಂಜೂರಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಎಷ್ಟು? (ವಿವರಗಳನ್ನು ಒದಗಿಸುವುದು)

ಆ) ಅವುಗಳಿಗೆ ಅವಶ್ಯವಿರುವ ಸಿಬ್ಬಂದಿ ವರ್ಗ ಹಾಗೂ ಕಟ್ಟಡ ಒದಗಿಸಿದೆಯೇ?

ಇ) ಮಂಜೂರಾದ ಯಾವ ಯಾವ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಕಟ್ಟಲು ಈ ವರ್ಷ ಸರ್ಕಾರ ಕ್ರಮ ಕೈಗೊಳ್ಳುವುದೇ?

ಈ) ಕಟ್ಟಲು ಯೋಚಿಸಿದ್ದಲ್ಲಿ ಅವು ಯಾವ ಹಂತದಲ್ಲಿದೆ?

ಉ) ಈ ವರ್ಷದಲ್ಲಿ ಒದಗಿಸಲಾದ ಹಣವೆಷ್ಟು?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ಹುಕ್ಕೇರಿ ವಿಧಾನ ಸಭಾ ಕ್ಷೇತ್ರದಲ್ಲಿ ಆರು ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರಾಗಿದೆ.

1) ಕಬ್ಬೂರು

2) ಕರಗಾಂ

3) ಪಾಶ್ಚಾಪುರ

4) ಇಸ್ಲಾಂಪುರ

5) ಯಮಕನ ಮರಡಿ

5) ನೋಗಿನಹಾಳ್

ಆ) ವೈದ್ಯಾಧಿಕಾರಿಗಳನ್ನು ಹಾಗೂ 'ಡಿ' ದರ್ಜೆ ನೌಕರರನ್ನು ಒದಗಿಸಲಾಗಿದೆ ಹಾಗೂ ತಾತ್ಕಾಲಿಕ ಕಟ್ಟಡಗಳನ್ನು ಒದಗಿಸಲಾಗಿದೆ.

ಇ) ಬೆಳಗಾಂ ಜಿಲ್ಲಾ ಪರಿಷತ್ತು ಈ ವಿಧಾನ ಸಭಾ ಕ್ಷೇತ್ರದಲ್ಲಿ ಈ ಸಾಲಿನಲ್ಲಿ ಆರೋಗ್ಯ ಕೇಂದ್ರಗಳ ಕಟ್ಟಡಗಳನ್ನು ಕಟ್ಟಲು ಕ್ರಮ ಕೈಗೊಂಡಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳ್ಳಬಟ್ಟಿ ಪ್ರಕರಣಗಳ ತಪಾಸಣೆ.

1038 - ಶ್ರೀ ಬಿ.ಎಂ. ಇದಿನಬ್ಬ, (ಉಳ್ಳಾಲ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1990-91, 1991-92ನೇ ಸೆಪ್ಟೆಂಬರ್ ಅಂತ್ಯದವರೆಗೆ ಕಳ್ಳಭಟ್ಟಿ ತಪಾಸಣೆಯ ಎಷ್ಟು ಪ್ರಕರಣಗಳಾಗಿವೆ?

ಆ) ಆ ಪ್ರಕರಣಗಳು ಎಲ್ಲೆಲ್ಲಿ ದೊರೆತಿವೆ? ಹಾಗೂ ಎಷ್ಟು ವಾಹನ ಇನ್ನಿತರ ಸಾಮಗ್ರಿ ಸಿಕ್ಕಿವೆ ಮತ್ತು ಎಷ್ಟು ಮದ್ಯಸಾರ ನಾಶಪಡಿಸಲಾಗಿದೆ? (ವಿವರ ಒದಗಿಸುವುದು).

ಇ) ಎಷ್ಟು ದಾವೆಗಳನ್ನು ಹಾಕಲಾಗಿದೆ? ಹಾಗೂ ಅದು ಎಲ್ಲೆಲ್ಲಿ ಮತ್ತು ಎಷ್ಟು ದಸ್ತಗಿರಿ ಆಗಿದೆ?

ಈ) ಈ ಕಳ್ಳಭಟ್ಟಿ ನಿಲ್ಲಿಸಲು ಸರ್ಕಾರವು ಇನ್ನೂ ಹೆಚ್ಚಿನ ಕಾರ್ಯಕ್ರಮ ಹಾಕಿಕೊಳ್ಳುವುದೇ?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) 1990-91(ಜುಲೈ -ಜೂನ್) 1,135 ಗುನ್ನೆಗಳು

1991-92 (ಜುಲೈ-ಸೆಪ್ಟೆಂಬರ್) 844 ಗುನ್ನೆಗಳು

ಆ) ಅನುಬಂಧ 'ಅ' ದಲ್ಲಿ ಒದಗಿಸಲಾಗಿದೆ.

ಇ) ದಾವೆಗಳು ಅನುಬಂಧ 'ಅ' ದಲ್ಲಿ ತಿಳಿಸಿರುವ ಗ್ರಾಮಗಳಿಗೆ ಸಂಬಂಧಿಸಿದೆ. ಮತ್ತು ದಸ್ತಗಿರಿ ಆದವರ ಸಂಖ್ಯೆ ಈ ಕೆಳಗೆ ನೆಮೂದಿಸಿದೆ.

	ದಾವೆಗಳು	ದಸ್ತಗಿರಿ ಆದವರ ಸಂಖ್ಯೆ
1990-91	1,135	420
1991-92	844	310

ಈ) ಹೌದು.

ANNEXURE-1

1. Mangalore Taluk

a) Adam Kudru

b) Thokotlu

c) Talapady

d) Ullal (Hoige Uliya)

e) Gathe Kudru

f) Permannur

g) Nermarga

h) Gurupura